


ಮಧ್ಯ ದಾರಿ ಗುಂಟ ಹೋಗಿ; ದೊಡ್ಡ ಮಾವಿನ ಮರದ ಪಾಗಾರದ ಮನೆಯೇ ಆಚಾರದ್ದು ಎಂದು ಪಾಳಿ ಪ್ರಕಾರ ಹೇಳಿದರು.

ಶರಾವತಿಯ ಒಡಲ ದ್ವೀಪ ಅದು. ಊರಿನ ಅಂಚನ್ನು ನದಿ ಬಳಸಿದ ರೀತಿಯನ್ನು ನೆನಪಿಸಿಕೊಂಡರೆ ಅದರ ನಕಾಶೆ ಬೀಗದ ಆಕಾರಕ್ಕೆ ಹೋಲುವಂತಿತ್ತು. ನಂದಾಚಾರಿಯ ಮನೆತನದ ಪೂರ್ವಿಕನಿಗೆ ಈ ಕಲ್ಪನೆ ಹೊಳೆದಿರಬಹುದು. ಊರನ್ನು ಕಾಪಾಡುವ, ಕಾಡುವ ನದಿಯೇ ಸಹಜ ಬೀಗದಂತ್ತಿತ್ತು. ದ್ವೀಪದಲ್ಲಿದ್ದವರಿಗೆ ನದಿಯೂ ದೋಣಿಯಲ್ಲಿದ್ದವರಿಗೆ ದ್ವೀಪವೂ ಅನಂತ ಯಾತ್ರೆ ಸಾಗಿದ ಮಾಯೆಯೇ.

ಕುರ್ವೆಯಲ್ಲಿ ಬೀಗ ತಯಾರಿಸುವ ಏಕೈಕ ಕುಟುಂಬ ನಂದಾಚಾರಿಯದಾಗಿತ್ತು. ದೋಣಿಯ ಸಹಯಾತ್ರಿಕರು ನೀಡಿದ ವಿಳಾಸ ತಪ್ಪಲಿಲ್ಲ. ನಾನು ನಡೆದ ದಾರಿ ನೇರವಾಗಿ ದಣಪೆ ದಾಟಿ ಮನೆಯ ಮೆಟ್ಟಿಲಿಗೆ ಕರೆದೊಯ್ಯಿತು. ದಣಪೆಯ ಸನಿಹ ನಿಂತಿದ್ದ ಕೂದಲುದುರಿದ, ಕಜ್ಜಿಯ ಜೋಲು ಚರ್ಮದ ಮುದಿ ನಾಯಿ ಕ್ಷೀಣವಾಗಿ ಬೊಗಳಿತು. ಎತ್ತರದ ತೆಂಗಿನ ಮರಗಳ ನೆರಳಿಂದ ಅಂಗಳ ಮತ್ತು ಹಿತ್ತಲಲ್ಲಿ ಚಪ್ಪರದ ತಂಪಿತ್ತು. ಪಾದಕ್ಕಂಟುವ ಉಸುಕು ಮಿಶ್ರಿತ ಮಣ್ಣು. ಹಿತ್ತಲಲ್ಲಿ ಅಲ್ಲಲ್ಲಿ ಬೇರಿನ ಗೊಂಚಲೆತ್ತಿಕೊಂಡು ನಿಂತ ತೆಂಗಿನ ಮರಗಳು; ಪ್ರತಿ ಸಲ ನದಿಗೆ ನೆಗೆಸು ಬಂದಾಗ ಕೊಚ್ಚಿಕೊಂಡು ಹೋಗಿದ್ದರ ಕುರುಹು. ಅರ್ಧ ತಗಡು ಇನ್ನರ್ಧ ಹಂಚು ಹೊದೆಸಿದ ಚಿರೆಗಲ್ಲಿನ ಮಾಡು ಮನೆ. ಅಟ್ಟದ ಕಿಟಕಿ ತೆರೆದಿದೆ. ಭಡಿ ಕಟ್ಟಿದ ಚಿಟ್ಟೆಯ ಅರ್ಧಕ್ಕೆ ಪೇರಿಸಿಟ್ಟ ಕೊಯ್ತದ ಹಲಗೆಗಳನ್ನು ತಾಡಪಾಲಿಂದ ಮುಚ್ಚಿಟ್ಟಿದ್ದಾರೆ. ನಂದಾಚಾರಿ ನನ್ನನ್ನೆ ಅಚ್ಚರಿಯಿಂದ ನೋಡುತ್ತಿದ್ದಾನೆ. ಕಂದು ಪಂಜಿಯನ್ನು ಕಚ್ಚೆ ಹಾಕಿ ಉಟ್ಟಿದ್ದಾನೆ. ತುಸು ಬಾಗಿದ ಬೆನ್ನು, ನೆರೆತ ಗಡ್ಡದ ಮುಂಬಲ್ಲಿನ ಮುಖ, ಹೊರ ಚಾಚಿದ ಪೊತ್ತ ಕೂದಲಿನ ಕಿವಿ, ಸೊಂಟಕ್ಕೆ ಸುತ್ತಿದ ಕೇಸರಿ ಟವೆಲ್, ಎದೆಯಿಂದ ಬಲಕ್ಕಿಳಿದ ದಪ್ಪ ಜನಿವಾರ, ಎದೆಯ ಮೇಲೆ ಕಾಶಿದಾರದಿಂದ ಕಟ್ಟಿದ ತಾಯಿತ ಎಲ್ಲ ಸುಗ್ಗಿ ಮೇಳದ ಮುದಿ ಹನುಮಂತನ ವೇಷವನ್ನು ಬರೆದಂತಿದ್ದವು. “ನಿಮ್ಮ ಮೊಕ ಕಂಡ ಕೂಡ್ಲೆ ಗೊತ್ತಾಯ್ತು ಮಂಜಪ್ಪನ ಹುಡ್ಕಂಡು ಬಂದ್ರಿ ಅಂತ. ಎಲ್ಲೆಲಿಂದಲೊ ಅವನಿಗೆ ಪತ್ರದ ಮ್ಯಾಲೆ ಪತ್ರ; ಫೋನ ಮ್ಯಾಲೆ ಫೋನು.” ನಂದಾಚಾರಿ